ಶ್ರೀ ಟಿ.ಬಿ. ಜಯಚಂದ್ರ.—೧೯೮೦-೮೧ನೇ ಸಾಲಿನಲ್ಲಿ ಹೆಚ್ಚು ಹಣ ಕೊಟ್ಟು ಜಾಸ್ತಿ ಕೆಲಸ ತೆಗೆದುಕೊಂಡಿರಿ. ಶಿರಾ-ಬಾಣಾವಾರ ರೋಡಿಗೆ ಈ ಸಾಲಿನಲ್ಲಿ ಖರ್ಚು ಮಾಡತಕ್ಕಂಥಾದ್ದು ೫ ಲಕ್ಷ ರೂಪಾಯಿ ಮಾತ್ರ ನನಗೆ ತಿಳಿದದ್ದು ೧೭ ಲಕ್ಷ. ಎಸ್ಟಿಮೇಟ್ ಆಗಿರುವುದು ಎಷ್ಟು, ಈ ಸಾಲಿಗೆ ನಿಗದಿ ಪಡಿಸಿರುವುದು ಎಷ್ಟು ಮತ್ತು ಶಿರಾ-ಬಾಣಾವಾರ ರಸ್ತೆಯಲ್ಲಿ ಯಾವ ಪಾಯಿಂಟಿನಿಂದ ನೀವು ಕೆಲಸ ಮಾಡುತ್ತೀರಿ ಎನ್ನತಕ್ಕಂಥ ವಿಷಯ ನನಗೆ ಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಅಂದಾಜು ಮೆಚ್ಚ ಈಗಾಗಲೇ ೧೫ ಲಕ್ಷಕ್ಕೆ ಮಾಡಿದೆ. ತಕ್ಷಣ ೫ ಲಕ್ಷ ರೂಪಾಯಿ ಮಂಜೂರಾತಿ ಕೊಟ್ಟಿದೆ.

ಶ್ರೀ ಟಿ.ಬಿ. ಜಯಚಂದ್ರ.—ಶಿರಾ-ಬಾಣಾವಾರ ರಸ್ತೆ ೫೦ ಮೈಲಿ ಇದೆ. ಯಾವ ಭಾಗದಿಂದ ಮಾಡುತ್ತೀರಿ ?

ಅಧ್ಯಕ್ಷರು.—ಅವರಿಗೆ ಕಳ್ಳಂಬೆಳ್ಳ ಕಡೆಯಿಂದ ಆಗಬೇಕು. ಬಾಣಾವಾರ ಕಡೆಯಿಂದ ಬಂದರೆ ಏನು ಪ್ರಯೋಜನ, ಅವರ ಭಾಗದಲ್ಲಿ ಆದರೆ ಅವರಿಗೆ ಸಮಾಧಾನ.

ಶ್ರೀ ಟಿ.ಬಿ. ಜಯಚಂದ್ರ —ಚಿಕ್ಕನಾಯಕನಹಳ್ಳಿ, ಪುಲಿಯೂರು ಹೋಬಳಿಯಲ್ಲಿ ಆಗಬೇಕಾಗಿರುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಎಸ್ಟಿಮೇಟ್‌ನಲ್ಲಿದೆ.

KSRTC Bus stolen in Gulbarga

416 SRI QUMARUL ISLAM (Gulbarga).—

SRI PRABHAKAR R. TELKAR (Chittapur).—

SRI BHEEMANNA KHANDRE (Bhalki).—

Will the Minister for Transport and Minor Irrigation be please to state.—

(a) whether it is a fact that a new bus was stolen away from the Karnataka State Road Transport Corporation Bus Depot at Gulbarga last year ;

(b) if so, action taken by the Government in this regard ?

SRI M.M.J. SADYOJATHA (Minister for Transport and Minor Irrigation).—

(a) Yes.

(b) The Karnataka State Road Transport Corporation lodged a complaint with the local police and alerted the Security Organisation of the neighbouring State Transport Undertakings. Different teams of the Security and Vigilance Squads were detailed for collection of intelligence and combing of the areas including the neighbouring States to trace the whereabouts of the vehicle. By the concerned efforts of the Karnataka State Road Transport Corporation Security personnel and the police, almost all the vital and costly assemblies of the vehicle have been recovered. One of the accused, an outsider

was arrested and based on the information furnished by him, property worth about Rs.1,80,000 has since been recovered. The other accused who is reported to be a removed Badli Driver is yet to be traced. Further investigation by the police with the assistance of the Security Personnel to trace the accused and to trace the other parts is in progress.

ಶ್ರೀ ಪ್ರಭಾಕರ್ ತೇಲ್ಕರ್.—ಗುಲ್ಬರ್ಗ ಡಿಪೋವಿನಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಏನು ಕಳುವಾಗಿದೆ ಅದು ಯಾವ ಡೇಟಿನಲ್ಲಿ ಕಳುವಾಗಿದೆ, ಯಾವಾಗ ಕಂಪ್ಲೈಂಟ್ ಕೊಟ್ಟಿರಿ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ. — ದಿನಾಂಕ ೧೮-೧೨-೧೯೮೦ರಲ್ಲಿ ಕಳುವಾಗಿದೆ. ದಿನಾಂಕ ೧೨-೫-೧೯೮೧ ರಲ್ಲಿ ಸುಳಿವು ಸಿಕ್ಕಿ ೧ ಲಕ್ಷ ೮೦ ಸಾವಿರ ರೂಪಾಯಿ ಬೆಲೆಬಾಳುವ ಗೂಡ್ಸ್ ಸಿಕ್ಕಿದೆ ನಮಗೆ.

ಶ್ರೀ ಪ್ರಭಾಕರ್ ತೇಲ್ಕರ್.—ಮಾನ್ಯ ಅಧ್ಯಕ್ಷರೆ, ನನಗೆ ಇದು ವಿಚಿತ್ರವೆಂಬಿಡ್ ಇರಬೇಕು ಎಂದು ಅನ್ನಿಸುತ್ತದೆ. ಈ ಬಸ್ ಹೊಸದು. ಹೊಸ ಬಸ್ಸು ಗುಲ್ಬರ್ಗ ಡಿಪೋನಿಂದ ಹೋಗಿಬಿಟ್ಟಿದೆ. ಜನರಿಗೆ ಏನು ಸಂಶಯ ಬರುತ್ತಾ ಇದೆ ಎಂದರೆ, ಬಸ್ ಕಳುವಾಗುತ್ತಾ ಇದೆ. ಇದು ಡಿಪೋನಿಂದ ಹೋದದ್ದು. ಸ್ಟಾಫ್‌ನಲ್ಲಿ ಅನುಮಾನ ಇದೆ, ಅದೇನು ಚೆಕ್‌ಅಪ್ ಮಾಡುವುದಕ್ಕೆ ಆಯಿತೋ ಇಲ್ಲವೊ, ಮತ್ತು ಈ ಹೊಸ ಬಸ್ಸಿನ ಬೆಲೆ ಎಷ್ಟು ಮತ್ತು ಅದಕ್ಕೆ ಯಾವ ಪ್ರಕಾರ ಆಕ್ಷನ್ ತೆಗೆದು ಕೊಳ್ಳುತ್ತಾ ಇದ್ದೀರಿ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅದು ಹೊಸ ಬಸ್ ಅಲ್ಲ. ಒಂದು ವರ್ಷ ೨ ತಿಂಗಳು ಆಗಿತ್ತು. ಇದರ ಬೆಲೆ ೨ ಲಕ್ಷ ರೂಪಾಯಿ ಆಗಬಹುದು ಎಂದು ಅಂದಾಜು. ಬದಲಿ ಡ್ರೈವರ್ ಮಂತ್ತು ಇನ್ನೊಬ್ಬನು ಮಹಮ್ಮದ್ ಉಸ್ಮಾನ್ ಇಬ್ಬರೂ ಸೇರಿ ಈ ಕೆಲಸ ಮಾಡಿದ್ದಾರೆ. ಬದಲಿ ಡ್ರೈವರನ್ನು ಕೆಲಸದಿಂದ ತೆಗೆದಿದ್ದು ಅವನು ಈ ಕೆಲಸ ಮಾಡಿದ್ದಾನೆ.

ಶ್ರೀ ಪ್ರಭಾಕರ್ ತೇಲ್ಕರ್.—ಬಸ್ ಕಳುವಾಗಿ ಹೋಯಿತು. ಅದು ಒಂದು ವರ್ಷ ಎರಡು ತಿಂಗಳದ್ದು ಎಂದು ಹೇಳಿದಿರಿ. ಅದನ್ನು ಕಂಡುಹಿಡಿಯಬೇಕಾದರೆ ಇಷ್ಟು ಏಕೆ ತಡವಾಯಿತು, ಅದಕ್ಕೆ ಕಾರಣಗಳೇನು ಎಂದು ಹೇಳುತ್ತೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಬಸ್ಸನ್ನು ಕಂಡುಹಿಡಿಯಬೇಕಾದರೆ ತಡ ಏಕೆ ಅಂದರೆ, ಬಸ್ ಸಿಕ್ಕಲಿಲ್ಲ ಆದ್ದರಿಂದ ತಡವಾಗಿದೆ.

SRI BHASKARA NAIDU.—Will the Hon. Minister be pleased to tell me, having stolen this bus, how many lives have been saved ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಮಾನ್ಯ ಸದಸ್ಯರಿಗೆ ನನಗಿಂತ ಚೆನ್ನಾಗಿ ಗೊತ್ತಿರಬಹುದು.

SRI PRABHAKAR TELKAR.—The buses are being stolen from the depot. There will be goods in the depot worth several lakhs. What action the Government has taken to protect the property of the government kept in the depot ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಸೆಕ್ಯೂರಿಟಿ ಬಗ್ಗೆ ಬಿಗಿಯಾದ ಕ್ರಮ ಕೈಗೊಳ್ಳಲಿಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇನೆ.

ಶ್ರೀ ಎಂ. ಚಂದ್ರಶೇಖರ್.—ಎರಡು ಲಕ್ಷ ಚಿಲ್ಲರೆ ಬೆಲೆ ಬಾಳುವಂಥ ಒಂದು ಬಸ್ ಹೋಗಿ ೧ ಲಕ್ಷ ೮೦ ಸಾವಿರ ರೂಪಾಯಿನಷ್ಟು ಗೂಡ್ಸ್ ವಾಪಸ್ ಬಂದಿದೆ ಎಂದು ಹೇಳಿದಿರಿ ಅದು ಯಾವ ರೂಪದಲ್ಲಿ ಬಂದಿದೆ, ಯಾವ ಯಾವ ಪಾರ್ಟ್‌ಗಳು, ಬೇರೆ ಬೇರೆ ವಿಭಾಗಗಳಲ್ಲಿ ಬಂದಿವೆಯೇ ಹೇಗೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಚಾಸೀಸ್ ಇನ್‌ಟಾಕ್ಟ್ ಬಂದಿದೆ. ೧ ಲಕ್ಷ ೮೦ ಸಾವಿರ ರೂಪಾಯಿಗಳಷ್ಟು ಗೂಡ್ಸ್ ಬಂದಿದೆ. ೧೩ ಸಾವಿರ ರೂಪಾಯಿಯಷ್ಟು ಗೂಡ್ಸ್ ಬರಬೇಕಾಗಿದೆ in the form of Tyre, Battery and other accessories. ಚಾಸೀಸ್ ಈಗ ರಿ ಅಸೆಂಬಲ್ ಆಗುತ್ತಿದೆ.

ಶ್ರೀ ಪ್ರಭಾಕರ್ ತೇಲ್ಕರ್.—ಈ ಪಾರ್ಟ್ಸ್ ಎಲ್ಲಿ ಸಿಕ್ಕಿತು. ಒಬ್ಬ ಡ್ರೈವರ್ ಉಸ್ಮಾನ್ ಎಂಬಾ ವವರ ಹೆಸರನ್ನು ಹೇಳಿದಿರಿ, ಈ ವಸ್ತುಗಳು ಎಲ್ಲಿ ಸಿಕ್ಕಿತು ? I would like to know from the Hon. Minister for Transport, whether the Bus was traced in Karnataka or outside the Karnataka and the persons responsible for taking such a bold step of stealing bus from the depot without fear of anybody ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈ ಬಸ್ ಹೈದರಾಬಾದಿನ ನಜರ್ ಆಲಿ, ಸ್ಕ್ರಾಪ್ ಡೀಲರ್ ಹತ್ತಿರ ಸಿಕ್ಕಿತು. ಆಮೇಲೆ ಜನತಾ ಟ್ರಾವಲ್ ಸರ್ವೀಸ್ ಬೀದರ್, ಅವರ ಹತ್ತಿರ ಕೆಲವು ಪಾರ್ಟ್‌ಗಳು ಸಿಕ್ಕಿವೆ.

ಶ್ರೀ ಪ್ರಭಾಕರ್ ತೇಲ್ಕರ್.—ಈ ಬಸ್ ಯಾರ ಕಡೆ ಸಿಕ್ಕಿದೆ, ಬೀದರ್‌ನಲ್ಲಿ ವಸ್ತುಗಳು ಯಾರ ಕಡೆ ಸಿಕ್ಕಿದೆ ಅವರ ಮೇಲೆ ಏನು ಆಕ್ಷನ್ ತೆಗೆದುಕೊಂಡಿದ್ದೀರಿ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ವಸ್ತುಗಳನ್ನು ವಶ ಮಾಡಿಕೊಂಡಿದ್ದೇವೆ, ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ವಂಸಿಯಪ್ಪ.—ಡಿಪೋನಲ್ಲಿ ನಿಂತಿದ್ದ ಕಡೆ ಬಸ್ ಕಳುವಾಗಿದೆಯೋ ಅಥವಾ ಲೈನ್‌ಮೇಲೆ ಹೋಗಿ ಬರುವುದಕ್ಕೆ ಮುಂಚೆ ಕಳುವಾಗಿದೆಯೋ ? ಡಿಪೋನಲ್ಲಿ ಯಾರಿಗೂ ತಿಳಿಯದೆ ಹೋಗಲಿಕ್ಕೆ ಸಾಧ್ಯವಿಲ್ಲ. ಯಾವ ಸಂದರ್ಭದಲ್ಲಿ ಕಳುವಾಗಿದೆಯೆನ್ನುವುದನ್ನು ಹೇಳುತ್ತೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಡಿಪೋನಿಂದಲೇ ಕಳುವಾಗಿದೆ.

SRI K. BHASKAR NAIDU.—The Bus has been robbed from the Depot. Has the Government warned all other depots in the State to be careful from such acts ?

SRI M. M. J. SADYOJATHA.—Yes Sir.

MR. SPEAKER.—Now, the question hour is over.

QUESTIONS FOR ANSWERS ON THE DAY
(but not taken up)

NRWS scheme in Belgaum Taluk.

218. SRI G. L. ASHTHEKAR (Bagewadi).—Will the Minister for Rural Development and Panchayat Raj be pleased to state.—

(a) whether it is a fact that NRWS scheme is sanctioned to Kadoli Village in Belgaum Taluk;

(b) if so, the estimated cost of the scheme ;

(c) when the work will be taken up ?